**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ: ಕಾಲಬದ್ಧ ಮುಂಬಡ್ತಿ ಯೋಜನೆ – ಕೆಳ ಹುದ್ದೆಯ ವೇತನ ಶ್ರೇಣಿಯಲ್ಲಿ ಮುಂದುವರಿಯಲು ಅಭಿಮತ ನೀಡುವ ಕಾಲಮಿತಿಯನ್ನು ವಿಸ್ತರಿಸುವ ಕುರಿತು.**

ಓದಲಾಗಿದೆ:
1) ಸ.ಆ.ಜ್ಞಾಸಂ: ಎಫ್‌ಡಿ 60 ಎಸ್‌ಆರ್‌ಪಿ 1984, ದಿನಾಂಕ 11.12.1985
2) ಸ.ಆ.ಸಂ: ಎಫ್ 32 ಎಸ್‌ಆರ್‌ಪಿ 1984, ದಿನಾಂಕ 18.04.1986
3) ಸ.ಆ.ಸಂ: ಎಫ್‌ಡಿ 53 ಎಸ್‌ಆರ್‌ಪಿ 1986, ದಿನಾಂಕ 26.08.1986
4) ಸ.ಆ.ಸಂ: ಎಫ್‌ಡಿ 50 ಎಸ್‌ಆರ್‌ಪಿ 1987, ದಿನಾಂಕ 24.06.1987
5) ಸ.ಆ.ಸಂ: ಎಫ್‌ಡಿ 16 ಎಸ್‌ಆರ್‌ಪಿ 2002 (I), ದಿನಾಂಕ 14.06.2002
6) ಸ.ಆ.ಸಂಖ್ಯೆ: ಎಫ್‌ಡಿ 24 ಎಸ್‌ಆರ್‌ಪಿ 2013(I), ದಿನಾಂಕ 14.11.2013.

**ಪ್ರಸ್ತಾವನೆ :**

ಅಧಿಕೃತ ಜ್ಞಾಪನ ಸಂಖ್ಯೆ: ಎಫ್‌ಡಿ 60 ಎಸ್‌ಆರ್‌ಪಿ 1984 ದಿನಾಂಕ 11.12.1985 ರಲ್ಲಿ 10 ವರ್ಷಗಳ ಸೇವೆಯನ್ನು ಪೂರೈಸುವ ಮೊದಲೇ ಉನ್ನತ ಹುದ್ದೆಗೆ ಮುಂಬಡ್ತಿ ಹೊಂದಿದ ಸರ್ಕಾರಿ ನೌಕರರು ಕಾಲಬದ್ಧ ಮುಂಬಡ್ತಿ ಯೋಜನೆಯಡಿಯಲ್ಲಿ ಆಯ್ಕೆ ಕಾಲಿಕ ವೇತನ ಶ್ರೇಣಿಗೆ ಅರ್ಹತೆ ಪಡೆಯುವವರೆಗೆ, ಕೆಳ ಹುದ್ದೆಯ ವೇತನ ಶ್ರೇಣಿಯಲ್ಲಿ ಮುಂದುವರೆಯಲು ಬಡ್ತಿ ಹೊಂದಿದ ದಿನಾಂಕದಿಂದ ಅಥವಾ ಈ ಅಧಿಕೃತ ಜ್ಞಾಪನ ಹೊರಡಿಸಿದ ದಿನಾಂಕದಿಂದ ಎರಡು ತಿಂಗಳ ಅವಧಿಯೊಳಗಾಗಿ ತನ್ನ ಅಭಿಮತವನ್ನು ಬರವಣಿಗೆಯಲ್ಲಿ ನೇಮಕಾಧಿಕಾರಿಗೆ ನೀಡತಕ್ಕದ್ದೆಂದು ಸ್ಪಷ್ಟೀಕರಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ: (2) ರಿಂದ (6) ರವರೆಗೆ ಓದಲಾದ ಸರ್ಕಾರಿ ಆದೇಶಗಳಲ್ಲಿ ಕಾಲಬದ್ಧ ಮುಂಬಡ್ತಿಗೆ ಅಭಿಮತ ಸಲ್ಲಿಸಲು ನಿಗದಿಪಡಿಸಿರುವ ಕಾಲಮಿತಿಯನ್ನು ಕಾಲಕಾಲಕ್ಕೆ ದಿನಾಂಕ 31.12.2013 ರವರೆಗೆ ವಿಸ್ತರಿಸಲಾಗಿತ್ತು. ಹಲವು ಇಲಾಖೆಗಳು ಈ ಕಾಲಾವಧಿಯನ್ನು ಮತ್ತೊಮ್ಮೆ ವಿಸ್ತರಿಸುವಂತೆ ಪ್ರಸ್ತಾಪಿಸಿದ್ದು, ಸರ್ಕಾರವು ಇದನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ 13 ಎಸ್‌ಆರ್‌ಪಿ 2015(I), ಬೆಂಗಳೂರು, ದಿನಾಂಕ 20ನೇ ಜೂನ್ 2015**

ದಿನಾಂಕ 01.04.1982 ರಂದು ಅಥವಾ ತದನಂತರದಲ್ಲಿ ಉನ್ನತ ಹುದ್ದೆಗೆ ಮುಂಬಡ್ತಿ ಹೊಂದಿರುವ ಸರ್ಕಾರಿ ನೌಕರರು ಕಾಲಬದ್ಧ ಮುಂಬಡ್ತಿಯ ಸೌಲಭ್ಯವನ್ನು ಪಡೆಯಲು ಅಭಿಮತ ನೀಡಲು ನಿಗದಿಪಡಿಸಲಾದ ಕಾಲಾವಧಿಯನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ **3 ತಿಂಗಳವರೆಗೆ** ಮತ್ತೆ ವಿಸ್ತರಿಸಲು ಸರ್ಕಾರವು ಹರ್ಷಿಸುತ್ತದೆ.

ಇಲಾಖಾ ಮುಖ್ಯಸ್ಥರುಗಳು ಈ ಆದೇಶವನ್ನು ಸಂಬಂಧಪಟ್ಟ ಎಲ್ಲಾ ನೌಕರರ ಗಮನಕ್ಕೆ ತರುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ಎಸ್.ರಾಜಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು-2)

**ಸಂಕಲನಕಾರರು, ಕರ್ನಾಟಕ ಗೆಜೆಟ್,** ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 100 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು

ಗೆ,
1. ಸರ್ಕಾರದ ಮುಖ್ಯ ಕಾರ್ಯದರ್ಶಿ/ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
2. ಎಲ್ಲಾ ಇಲಾಖಾ ಮುಖ್ಯಸ್ಥರುಗಳು/ ಜಿಲ್ಲೆಗಳ ಜಿಲ್ಲಾಧಿಕಾರಿಗಳು
3. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
4. ಪ್ರಧಾನ ಮಹಾಲೇಖಪಾಲರು(ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
5. ಪ್ರಧಾನ ಮಹಾಲೇಖಪಾಲರು(ಕಂದಾಯ ಸ್ವೀಕೃತಿ ಮತ್ತು ಕಾಮಗಾರಿಗಳು ಮತ್ತು ಅರಣ್ಯ ಲೆಕ್ಕಪರಿಶೋಧನೆ), ಕರ್ನಾಟಕ ಬೆಂಗಳೂರು
6. ಮಹಾಲೇಖಪಾಲರು(ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು
7. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ,ಬೆಂಗಳೂರು
8. ರಿಜಿಸ್ಟ್ರಾರ್, ಕರ್ನಾಟಕ ನ್ಯಾಯ ಮಂಡಳಿ, ಬೆಂಗಳೂರು
9. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
10. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ
11. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು, ಬೆಂಗಳೂರು
12. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು
13. ಪ್ರಾಜೆಕ್ಟ್ ಆಫೀಸರ್, ಹೆಚ್.ಎಂ.ಆರ್.ಎಸ್. ಕೊಠಡಿ ಸಂಖ್ಯೆ:145ಎ, ಬಹುಮಹಡಿ ಕಟ್ಟಡ, ಬೆಂಗಳೂರು
14. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು
15. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು
16. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ
17. ವಾರಪತ್ರ/ಶಾಖೆಯ ರಕ್ಷಾ ಕಡತ

**www.finance.kar.nic.in**